ದಿನಾಂಕಃ 14-10-2025 ರಂದು ಪಿಡಬ್ಲ್ಯೂ-1 ಸಾಕ್ಷಿದಾರರನ್ನು ಪುನಃ ಕರೆಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಪಾಟೀ ಸವಾಲುಃ 3 ನೇ ಎದುರುದಾರರ ಪರವಾಗಿ ಶ್ರೀ ಕೆ ಎಮ್ ಪಿ ವಕೀಲರಿಂದಃ**

2. ನನ್ನ ಜಮೀನು ಒಣ ಜಮೀನು ಎಂದರೆ ಸರಿ. ಈಗ ನಮ್ಮ ಜಮೀನಿನಲ್ಲಿ ಕೆನಾಲ್ ಮಾಡಿರುತ್ತಾರೆಂದರೆ ಸರಿ. ಕೆನಾಲ್ ಆದ ನಂತರ ನಮ್ಮ ಜಮೀನು ನೀರಾವರಿ ಆಗಿರುತ್ತದೆಂದರೆ ಸರಿಯಲ್ಲ. ನಮ್ಮ ಜಮೀನಿನ 1 ಎಕರೆಯ ಕಿಮ್ಮತ್ತು ರೂ. 80,00,000/- ಆಗುತ್ತದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ವರ್ಷಕ್ಕೆ 1 ಬೆಳೆ ಬೆಳೆಯುತ್ತಿದ್ದರೂ ಸಹ 2 ಬೆಳೆ ಬೆಳೆಯುತ್ತಿದ್ದೆವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ನಮ್ಮ ಜಮೀನು ಶಿರೂರ ಗ್ರಾಮದಿಂದ 5-6 ಕಿಲೋಮೀಟರ ದೂರದಲ್ಲಿರುತ್ತದೆಂದರೆ ಸರಿಯಲ್ಲ. ಬಾಗಲಕೋಟೆಯಿಂದ ಶಿರೂರ 25 ಕಿಲೋಮೀಟರ ದೂರದಲ್ಲಿರುತ್ತದೆಂದರೆ ಸರಿಯಲ್ಲ. 15 ಕಿಲೋಮೀಟರ ದೂರದಲ್ಲಿರುತ್ತದೆ. ನಮ್ಮ ಜಮೀನಿನ ಸುತ್ತಮುತ್ತಲಿನ ಯಾವುದೇ ಜಮೀನುಗಳು ಬಿನ್ ಶೇತ್ಕಿ ಆಗಿರುವುದಿಲ್ಲವೆಂದರೆ ಸರಿ. ಆದರೆ ಅರ್ಧ ಕಿಲೋಮೀಟರ ದೂರದಲ್ಲಿ ಆಗಿರುತ್ತವೆ. ನನ್ನ ಜಮೀನು ರಾಷ್ಟ್ರೀಯ ಹೆದ್ದಾರಿಗೆ ತಾಕಿಕೊಂಡಿರುವುದಿಲ್ಲವೆಂದರೆ ಸರಿ. ಆದರೆ 45-50 ಮೀಟರ ದೂರದಲ್ಲಿರುತ್ತದೆ. ನಮ್ಮ ಜಮೀನು ಬಿನ್ ಶೇತ್ಕಿ ಮಾಡಲು ಯೋಗ್ಯವಾಗಿರುತ್ತದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

4. ನಾನು ಹಾಜರುಪಡಿಸಿದ ಕ್ರಯಪತ್ರಗಳು ಗುಂಟಾ ಪ್ಲಾಟಗಳಿಗೆ ಸಂಬಂದಪಟ್ಟಿರುತ್ತದೆಂದರೆ ಸರಿಯಲ್ಲ. ಖರೀದಿ ಪತ್ರದ ಜಮೀನುಗಳ ಗುಣಧರ್ಮ ಮತ್ತು ನನ್ನ ಜಮೀನಿನ ಗುಣಧರ್ಮ ಬೇರೆ ಬೇರೆಯಾಗಿರುತ್ತದೆಂದರೆ ಸರಿಯಲ್ಲ. ನನ್ನ ಜಮೀನಿನಿಂದ ಖರೀದಿ ಪತ್ರದ ಜಮೀನುಗಳು 5-6 ಕಿಲೋಮೀಟರ ದೂರದಲ್ಲಿರುತ್ತದೆಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಕ್ರಯಪತ್ರಗಳನ್ನು ಭೂಸ್ವಾಧೀನದ ಪೂರ್ವದಲ್ಲಿ ಈ ಅರ್ಜಿಗಾಗಿ ಹೆಚ್ಚಿನ ಪರಿಹಾರ ಪಡೆಯಲು ಸೃಷ್ಟಿಸಲಾಗಿರುತ್ತದೆಂದರೆ ಸರಿಯಲ್ಲ.

5. ಭೂಸ್ವಾಧೀನಾಧಿಕಾರಿಗಳು ನಮ್ಮ ಜಮೀನಿಗೆ ಬೇಟಿ ಕೊಟ್ಟಿದ್ದರು ಎಂದರೆ ಸರಿ. ಅವರ ಬೇಟಿ ಕೊಟ್ಟಿದ್ದ ಸಮಯದಲ್ಲಿ ಸ್ಥಳ ಪರಿಶೀಲಿಸಿ ಮತ್ತು ಜಮೀನಿನ ಮಣ್ಣಿನ ಗುಣಧರ್ಮವನ್ನು ಪರೀಕ್ಷಿಸಿ ಸೂಕ್ತ ಪರಿಹಾರವನ್ನು ನಿರ್ಣಯಿಸಿರುತ್ತಾರೆ ಮತ್ತು ನೀಡಿರುತ್ತಾರೆಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಕೋರಿ ಸಲ್ಲಿಸಿದ ಪರಾಮರ್ಶೆ ಅರ್ಜಿಯನ್ನು ನಿಗದಿತ ಕಾಲಾವಾದಿಯಲ್ಲಿ ಸಲ್ಲಿಸಿರುವುದಿಲ್ಲವೆಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರವಾಗಿ ಮಾನ್ಯ ಡಿಜಿಪಿ ವಕೀಲರಿಂದಃ</u>**

6. ನನ್ನ ಜಮೀನು ಶಿರೂರ ಗ್ರಾಮ ಪಂಚಾಯತಿಗೆ ಸೇರಿರುತ್ತದೆ. ಎಷ್ಟು ವಿಸ್ತೀರ್ಣದ ಜಮೀನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆಂದು ನನಗೆ ಅಂಕಿ ಅಂಶಗಳು ಗೊತ್ತಿರುವುದಿಲ್ಲ. ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನಮ್ಮ ಜಮೀನಿನಲ್ಲಿ ಮೆಣಸಿನಕಾಯಿ ಮತ್ತು ಉಳ್ಳಾಗಡ್ಡಿ ಬೆಳೆಯುತ್ತಿದ್ದೆವು. ಎರಡೂ ಬೆಳೆಗಳು ಮಳೆ ಆಶ್ರಿತ ಬೆಳೆಗಳು ಎಂದರೆ ಸರಿ. ಸದರಿ ಬೆಳೆಗಳು ದೀರ್ಘ ಕಾಲದ ಬೆಳೆಗಳು ಆಗಿರುವುದಿಲ್ಲ ಮತ್ತು 3-4 ತಿಂಗಳುಗಳಿಗೆ ಬರುವ ಬೆಳೆಗಳು ಎಂದರೆ ಸರಿ. ನಮ್ಮ ಜಮೀನು ಗ್ರಾಮ ಪಂಚಾಯತಿಗೆ ಸೇರಿರುವುದರಿಂದ ಸರಕಾರದವರು ಕಡಿಮೆ ಮಾರುಕಟ್ಟೆ ಬೆಲೆಯನ್ನು ಗೊತ್ತು ಮಾಡಿರುತ್ತಾರೆಂದರೆ ಸರಿ. ಗ್ರಾಮ ಪಂಚಾಯತಿಗೆ ಸೇರಿದ ಜಮೀನುಗಳನ್ನು ಅತ್ಯಂತ ಕಡಿಮೆ ಬೆಲೆ ಯಾವುದು ಇರುತ್ತದೆಯೋ ಆ ಬೆಲೆಗೆ ಮಾರಾಟ ಮಾಡುತ್ತಾರೆಂದರೆ ಸರಿ.

7. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯಾವುದೇ ದೊಡ್ಡ ಕೈಗಾರಿಕೆಗಳು ಇರುವುದಿಲ್ಲವೆಂದರೆ ಸರಿ. ಭೂಸ್ವಾದೀನಾದಿಕಾರಿಗಳು ನಮ್ಮ ಜಮೀನಿಗೆ ಸೂಕ್ತ ಪರಿಹಾರ ನೀಡಿರುತ್ತಾರೆಂದರೆ ಸರಿಯಲ್ಲ. ನಮ್ಮ ಶಿರೂರ

ಗ್ರಾಮಕ್ಕೆ ಕಮತಗಿ ಗ್ರಾಮ ಹತ್ತಿರವಾಗುತ್ತದೆಂದರೆ ಸರಿ. ಭೂಸ್ವಾಧೀನಾಧಿಕಾರಿಗಳು ಸೂಕ್ತ ಪರಿಹಾರವನ್ನು ನಿರ್ಣಯಿಸಿದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ .